ದಿನಾಂಕ ೨೮.೦೨.೨೦೧೯ ರಂದು ಪ್ರಾಸ ೧ ರವರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

*ಪಾಟೀ ಸವಾಲು:: ಆರೋಪಿಪರ ಶ್ರೀ ಸಿ.ಎನ್.ವಿ ವಕೀಲರಿಂದ::*

ನಾನು ಈ ಹಿಂದೆ ಯಾವುದೇ ಲೋಕಾಯುಕ್ತ ಪ್ರಕರಣಗಳಲ್ಲಿ ಸಾಕ್ಷಿಯಾಗಿ ಹೋಗಿರಲಿಲ್ಲ. ನಿಪಿ-1 ನ್ನು ನಾನು ಓದಿದ್ದೇನೆ. ಆರೋಪಿ ಮನೆ ಮತ್ತು ಕಚೇರಿ ಇವುಗಳನ್ನು ಶೋಧನೆ ನಡೆಸಲು ನಿಪಿ-1 ನ್ನು ಪಡೆಯಲಾಗಿತ್ತು. ಆರೋಪಿ ಮನೆಯಲ್ಲಿ ಯಾವ ಭಾಗದಲ್ಲಿ ಶೋಧನೆ ನಡೆಸಬೇಕೆಂದು ನಮೂದು ಇರಲಿಲ್ಲ, ಆದರೆ ಸಂಪೂರ್ಣ ಮನೆಯನ್ನು ಶೋಧನೆ ಮಾಡಬೇಕಾಗಿತ್ತು. ನನಗೆ ತಾಂತ್ರಿಕ ಉಪಕರಣಗಳು, ಅಲಂಕಾರಿಕ ವಸ್ತುಗಳು, ಎಲೆಕ್ಟ್ರಾನಿಕ್ ವಸ್ತುಗಳು, ಚಿನ್ನಬೆಳ್ಳಿ ಆಭರಣಗಳು ಮತ್ತು ಉಡುಪುಗಳು ಇವುಗಳನ್ನು ನೋಡಿ ಅವುಗಳ ನಿಖರ ಬೆಲೆಯನ್ನು ಹೇಳಲು ಆಗುವುದಿಲ್ಲ, ಆದರೆ ಅಂದಾಜು ಬೆಲೆ ಹೇಳಬಹುದು. ದಾಳಿ ನಡೆದ ದಿನ ಪೊಲೀಸರು ತಮ್ಮ ಜೊತೆ ಅಕ್ಕಸಾಲಿಗನನ್ನು ಬಿಟ್ಟು ಬೇರೆ ವಸ್ತುಗಳ ಬೆಲೆ ಕಂಡುಹಿಡಿಯುವ ತಜ್ಞರನ್ನು ತಮ್ಮ ಜೊತೆ ಕರೆತಂದಿರಲಿಲ್ಲ. ನಿಪಿ-1 ರಲ್ಲಿ ವಸ್ತುಗಳ ಅಂದಾಜು ಮೌಲ್ಯವನ್ನು ನಾನು ಮತ್ತು ಲೋಕಾಯುಕ್ತ ಸಿಬ್ಬಂದಿಯವರು ಸೇರಿ ನಮೂದು ಮಾಡಿದ್ದೇವೆ. ನಿಪಿ-1 ರ ಸಮಯದಲ್ಲಿ ವಸ್ತುಗಳ ಮೌಲ್ಯವನ್ನು ನೇರವಾಗಿ ಲ್ಯಾಪ್‌ಟಾಪ್‌ನಲ್ಲೇ ಟೈಪ್ ಮಾಡಲಾಯಿತು, ಆದರೆ ಪ್ರತ್ಯೇಕವಾಗಿ ಒಂದು ಕಾಗದದಲ್ಲಿ ಅವುಗಳ ಮೌಲ್ಯವನ್ನು ಬರೆದುಕೊಳ್ಳಲಿಲ್ಲ. ಶೋಧನಾ ಕಾರ್ಯದ ವಿಡಿಯೋ ಮಾಡಲಿಲ್ಲ. ಶೋಧನಾ ಕಾರ್ಯ ನಡೆಯುತ್ತಿದ್ದಾಗ ಆರೋಪಿ ಮನೆಯಲ್ಲಿ ಆರೋಪಿ, ಆತನ ಪತ್ನಿ , ಮಗ ಹಾಗೂ ಮಗಳು ಇದ್ದರು. ಶೋಧನಾಕಾರ್ಯ ನಡೆಯುತ್ತಿದ್ದಾಗ ಆರೋಪಿಯ ಪತ್ನಿ ಪ್ರತ್ಯೇಕವಾಗಿ ನೀಲಗಿರಿ ತೈಲ ಉತ್ಪನ್ನದ ವ್ಯವಹಾರ ನಡೆಸುತ್ತಿದ್ದರು ಎಂದು ತಿಳಿದುಬಂತು. ಅದೇ ರೀತಿ ಆರೋಪಿಯ ಮಗ ಶ್ರೀರಾಮ್ ಫೈನಾನ್ಸ್ ಸಂಸ್ಥೆಯಲ್ಲಿ ತಾತ್ಕಾಲಿಕವಾಗಿ ಕೆಲಸ ಮಾಡುತ್ತಿದ್ದ ಎಂದು ತಿಳಿದುಬಂತು. ಶೋಧನಾ ಕಾರ್ಯ ನಡೆಯುತ್ತಿದ್ದಾಗ ಆರೋಪಿಯ ಪತ್ನಿ ಕೆಲವು ವಸ್ತುಗಳು ತನಗೆ ಸ್ವಂತವಾಗಿ ಸೇರಿದ್ದು ಎಂದು ತಿಳಿಸಿದರು ಎಂದರೆ ಸರಿ. ಅದೇ ರೀತಿ ಆರೋಪಿಯ ಮಗ ತನ್ನ ಉಡುಪುಗಳು ತನಗೆ ಸ್ವಂತವಾಗಿ ಸೇರಿದ್ದು ಎಂದು ತಿಳಿಸಿದರು ಎಂದರೆ ಸರಿ. ನಿಪಿ1 ರಲ್ಲಿ ಕಾಣಿಸಿರುವ ವಸ್ತುಗಳ ಮೌಲ್ಯವನ್ನು ನಾನು ಮತ್ತು ಲೋಕಾಯುಕ್ತ ಸಿಬ್ಬಂದಿ ವರ್ಗದವರು ಉತ್ಪ್ರೇಕ್ಷೆ ಮಾಡಿ ನಮೂದು ಮಾಡಿದ್ದೇವೆ ಎಂದರೆ ಸುಳ್ಳು. ನಿಪಿ1 ರ ಮೇಲೆ ನಾನು ಮತ್ತು

ಮತ್ತೊಬ್ಬ ಸಾಕ್ಷಿ ಚಂದ್ರಮ್ಮ ಇಬ್ಬರೂ ಲೋಕಾಯುಕ್ತ ಕಚೇರಿಯಲ್ಲಿ ಮಾಡಿರುತ್ತೇವೆ ಎಂದರೆ ಸುಳ್ಳು. ಶೋಧನಾ ಕಾರ್ಯದಲ್ಲಿ ನಮಗೆ ಕೆಲವು ವಸ್ತುಗಳು ಆರೋಪಿಯ ಪಿತ್ರಾರ್ಜಿತ,



ಕೆಲವು ವಸ್ತುಗಳು ಆತನ ಪತ್ನಿ ಮತ್ತು ಮಗನ ಸ್ವಂತ ವಸ್ತುಗಳು ಎಂದು ನಮಗೆ ಕಂಡುಬಂದರೂ ಸಹ ಎಲ್ಲಾ ವಸ್ತುಗಳು ಆರೋಪಿಗೆ ಸೇರಿದ್ದು ಎಂದು ಸುಳ್ಳು ನಮೂದು ಮಾಡಿದ್ದೇವೆ ಎಂದರೆ ಸುಳ್ಳು. ನಿಪಿ-2 ರಿಂದ ನಿಪಿ-61 ನ್ನು ಆರೋಪಿ ಮನೆಯಿಂದ ಅಮಾನತುಪಡಿಸಿದ ದಾಖಲೆಗಳಲ್ಲ ಎಂದರೆ ಸುಳ್ಳು. ನಿಪಿ1 ರ ಸಮಯದಲ್ಲಿ ನಾನು ಆರೋಪಿ ಮನೆಯಲ್ಲಿ ಇರಲಿಲ್ಲ ಎಂದರೆ ಸುಳ್ಳು. ನಿಪಿ1 ನ್ನು ಲೋಕಾಯುಕ್ತ ಕಚೇರಿಯಲ್ಲಿ ತಯಾರು ಮಾಡಿ ಅಲ್ಲೇ ನನ್ನ ರುಜು ಮಾಡಿದ್ದೇನೆ ಎಂದರೆ ಸುಳ್ಳು.

ಶೋಧನಾ ಕಾರ್ಯದಲ್ಲಿ ದೊರೆತ ಎಲ್ಲಾ ವಸ್ತುಗಳ ಪಟ್ಟಿಯನ್ನು ಮಾಡಿ, ಆ ಪಟ್ಟಿಯ ಒಂದು ನಕಲನ್ನು ಆರೋಪಿಗೆ ಕೊಟ್ಟು ಆತನ ರುಜು ಪಡೆದಿದ್ದೇವೆ. ಆ ನಕಲಿಗೆ ನಾನೂ ಸಹ ರುಜು ಮಾಡಿದ್ದೇನೆ. ಆರೋಪಿಗೆ ನೀಡಿದ ವಸ್ತುಗಳ ಪಟ್ಟಿಯ ನಕಲಿನಲ್ಲಿ ಆ ವಸ್ತುಗಳ ಮೌಲ್ಯವನ್ನು ನಮೂದು ಮಾಡಲಾಗಿತ್ತು. ಶೋಧನಾ ಕಾರ್ಯ ಮುಗಿದ ಮೇಲೆ ವಸ್ತುಗಳ ಪಟ್ಟಿಯ ನಕಲನ್ನು ಆರೋಪಿಗೆ ಕೊಡಲಾಯಿತು. ಮೇಲ್ಕಂಡ ನಕಲೂ ಸಹ ಕಂಪ್ಯೂಟರಿನಲ್ಲಿ ಟೈಪ್ ಮಾಡಿಕೊಡಲಾಗಿತ್ತು. ಆರೋಪಿಗೆ ನಿಪಿ1 ರ ನಕಲನ್ನೇ ಕೊಟ್ಟಿದ್ದೇವೆ ಹೊರತು ಪ್ರತ್ಯೇಕವಾದ ವಸ್ತುಗಳ ಪಟ್ಟಿಯ ನಕಲನ್ನು ಕೊಟ್ಟಿಲ್ಲ. ನಾವು ಆರೋಪಿ ಕಚೇರಿಗೆ ಭೇಟಿ ನೀಡಿಲ್ಲ ಎಂದರೆ ಸುಳ್ಳು. ನಿಪಿ-62 ನ್ನು ಲೋಕಾಯುಕ್ತ ಕಚೇರಿಯಲ್ಲೇ ತಯಾರಿಸಿ ಅಲ್ಲೇ ನಮ್ಮ ರುಜು ಪಡೆದಿದ್ದಾರೆ ಎಂದರೆ ಸುಳ್ಳು. ನಾನು ಸರ್ಕಾರಿ ನೌಕರನಾಗಿರುವುದರಿಂದ ನನ್ನ ಹೇಳಿಕೆಗೆ ವಿರುದ್ಧವಾಗಿ ಸಾಕ್ಷ್ಯ ನುಡಿದರೆ ನನಗೆ ತೊಂದರೆಯಾಗುತ್ತದೆಂದು ತಿಳಿದು ಆರೋಪಿ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸುಳ್ಳು. ದೈನಂದಿನ ಉಪಯೋಗಿಸುವ ವಸ್ತುಗಳ ಅಂದಾಜು ಬೆಲೆಯನ್ನು ಹೇಳಲು ನನಗೆ ಅನುಭವ ಇಲ್ಲ ಎಂದರೆ ಸುಳ್ಳು. ನಿಪಿ1 ರಲ್ಲಿ ಕಾಣಿಸಿರುವ ವಸ್ತುಗಳ ಮೌಲ್ಯವನ್ನು ಲೋಕಾಯುಕ್ತ ಪೊಲೀಸರು ಕಲ್ಪನೆಯ ಮೇರೆಗೆ ಹೆಚ್ಚಾಗಿ ತೋರಿಸಿದ್ದಾರೆ ಎಂದರೆ ಸುಳ್ಳು.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಪ್ರಕಾರ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ ಇದೆ

**ಪ್ರಧಾನ ಜಿಲ್ಲಾ ನ್ಯಾಯಾಧೀಶರು,**
***ಹಾಸನ.***